# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 742(938) |
| ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 27.12.2022 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ನಗರದ ಟೂಡಾ ಬಡಾವಣೆಯಲ್ಲಿ ನಿರ್ಮಿಸಿರುವ ಕ್ರೀಡಾ ಸಮುಚ್ಚಯ ಉದ್ಘಾಟನೆಯಾಗಿ 4 ವರ್ಷ ಕಳೆದರೂ ಸಹ ಕ್ರೀಡಾಪಟುಗಳ ಬಳಕೆಗೆ ಅವಕಾಶ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿದೆ. ತುಮಕೂರು ನಗರದ ಟೂಡಾ ಬಡಾವಣೆಯಲ್ಲಿ ಕ್ರೀಡಾ ಸಮುಚ್ಚಯದ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ದಿನಾಂಕ:21.04.2018 ರಂದು ಮುಕ್ತಾಯಗೊಳಿಸಲಾಗಿದೆ. ಸದರಿ ಕ್ರೀಡಾ ಸಮುಚ್ಚಯವನ್ನು ಬಾಡಿಗೆ ನೀಡಲು ಅನುವಾಗುವಂತೆ ಪ್ರಾಧಿಕಾರದ ವತಿಯಿಂದ<br>1) ದಿನಾಂಕ:24.09.2018 ರಿಂದ 23.10.2018,<br>2) ದಿನಾಂಕ:05.11.2018 ರಿಂದ 10.12.2018,<br>3) ದಿನಾಂಕ:04.02.2019 ರಿಂದ 05.03.2019,<br>4)ದಿನಾಂಕ:29.04.2019 ರಿಂದ 03.06.2019 ಗಳಂದು 4 ಬಾರಿ ಟೆಂಡರ್ ಕರೆಯಲಾಗಿರುತ್ತದೆ. ಆದರೆ, ಯಾವುದೇ ಬಿಡ್ ದಾರರು ಭಾಗವಹಿಸದ ಕಾರಣ ಕ್ರೀಡಾ ಸಮುಚ್ಚಯವನ್ನು ಬಾಡಿಗೆಗೆ ನೀಡಲು ಸಾಧ್ಯವಾಗಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಕ್ರೀಡಾ ಸಮುಚ್ಚಯವನ್ನು ಕ್ರೀಡಾಪಟುಗಳಿಗೆ ಬಳಕೆ ಮಾಡುವಂತೆ ಅವಕಾಶವನ್ನು ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಕ್ರೀಡಾ ಸಮುಚ್ಚಯವು ಸುಸ್ಥಿತಿಯಲ್ಲಿದ್ದು, ಬಳಕೆಗೆ ಯೋಗ್ಯವಾಗಿದ್ದರಿಂದ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ರವರ ನಿರ್ದೇಶನದ ಮೇರೆಗೆ ಕ್ರೀಡಾ ಸಮುಚ್ಚಯವನ್ನು ಕೋವಿಡ್ ಸೆಂಟರ್ ಆಗಿ ಮಾರ್ಪಡಿಸಿ ಬಳಸಿಕೊಳ್ಳಲಾಗಿರುತ್ತದೆ. 2022-23 ನೇ ಸಾಲಿನಲ್ಲಿ ಸುರಿದ ಭಾರಿ ಮಳೆಯಿಂದ ಹಾನಿಗೊಳಗಾದ ಸಂತ್ರಸ್ಥರಿಗೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರ ನಿರ್ದೇಶನದ ಮೇರೆಗೆ ದಿನಾಂಕ:20.08.2022 ರಂದು ಕಾಳಜಿ ಕೇಂದ್ರವನ್ನು ಕ್ರೀಡಾ ಸಮುಚ್ಚಯದಲ್ಲಿ ಪ್ರಾರಂಭಿಸಲಾಗಿದೆ. ದಿನಾಂಕ:11.11.2022 ರಿಂದ ಕಾಳಜಿ ಕೇಂದ್ರವನ್ನು ಸ್ಥಗಿತಗೊಳಿಸಿ ಕ್ರೀಡಾ ಸಮುಚ್ಚಯವನ್ನು ಪ್ರಾಧಿಕಾರದ ವಶಕ್ಕೆ ಪಡೆಯಲಾಗಿದೆ. ದಿನಾಂಕ:23.11.2022 ರಂದು ಕ್ರೀಡಾ ಸಮುಚ್ಚಯದ ಬಾಡಿಗೆ ನಿಗಧಿಪಡಿಸಲು ಲೋಕೋಪಯೋಗಿ ಇಲಾಖೆ, ತುಮಕೂರು ರವರಿಗೆ ಪತ್ರ ಬರೆಯಲಾಗಿದೆ. ಸದರಿ ಇಲಾಖೆಯಿಂದ ಕಟ್ಟಡದ ದರ ನಿಗಧಿಯಾದ ನಂತರ ಸದರಿ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ನೀಡಲು ಟೆಂಡರ್ ಕರೆಯಲು ಕ್ರಮವಹಿಸಲಾಗುವುದು. |

**ಸಂಖ್ಯೆ: ನಅಇ 59 ಎಲ್‌ಸಿಕ್ಯೂ 2022(ಇ-ಕಡತ)**

(ಬಿ.ಎ. ಬಸವರಾಜು)
ನಗರಾಭಿವೃದ್ಧಿ ಸಚಿವರು